ಕರ್ನಾಟಕ ಸರ್ಕಾರ

**ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 21**

# ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964

**(1965ರ 11, 1976ರ 81, 1978ರ 8, 1978ರ 28, 1980ರ 13, 1981ರ 11, ಮತ್ತು 1985ರ 26ರ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)**

**ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 21**

# ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964

**(1965ರ 11, 1976ರ 81, 1978ರ 8, 1978ರ 28, 1980ರ 13, 1981ರ 11, ಮತ್ತು 1985ರ 26ರ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)**

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

## ಅಧಿಸೂಚನೆ

### ಕ್ರಮಾಂಕ ಲಾ 28 ಎಲ್‌ಎಂಪಿ 89, ಬೆಂಗಳೂರು, ದಿನಾಂಕ 4ನೇ ಜುಲೈ, 1989

ಕರ್ನಾಟಕ ರಾಜ ಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964ರ (ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 21) ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯ ಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ,**
ಕರ್ನಾಟಕ ರಾಜ್ಯಪಾಲರು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
(ಪ್ರಕಟಣೆಗಳು).

## ವಿಷಯಾನುಕ್ರಮಣಿಕೆ

### ಅಧ್ಯಾಯ–I

### ಪ್ರಾರಂಭಿಕ


| | | ಪುಟಗಳು |
|---|---|---|
| 1. | ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 1 |
| 2. | ಪರಿಭಾಷೆಗಳು | 2 |


### ಅಧ್ಯಾಯ–II

### ಸಿವಿಲ್ ನ್ಯಾಯಾಲಯಗಳ ಸ್ಥಾಪನೆ ಮತ್ತು ರಚನೆ


| | | |
|---|---|---|
| 3. | ಸಿವಿಲ್ ನ್ಯಾಯಾಲಯಗಳ ವರ್ಗ ಮತ್ತು ಹೆಸರು | 2 |
| 4. | ಜಿಲ್ಲೆಗಾಗಿ ಜಿಲ್ಲಾ ನ್ಯಾಯಾಲಯದ ಸ್ಥಾಪನೆ | 2 |
| 5. | ಅಡಿಷನಲ್ ಜಿಲ್ಲಾ ನ್ಯಾಯಾಧೀಶರ ನೇಮಕಾತಿ | 3 |
| 6. | ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳ ಸ್ಥಾಪನೆ | 3 |
| 7. | ಮುನ್ಸಿಫರುಗಳ ನ್ಯಾಯಾಲಯಗಳ ಸ್ಥಾಪನೆ | 3 |
| 8. | ಸಿವಿಲ್ ನ್ಯಾಯಾಧೀಶನ ಆಥವಾ ಮುನ್ಸಿಫನ ನ್ಯಾಯಾಯಕ್ಕೆ ಸಿವಿಲ್ ನ್ಯಾಯಾಧೀಶರ ಮತ್ತು ಮುನ್ಸಿಫರ ಸಂಖ್ಯೆ | 3 |
| 9. | ನ್ಯಾಯಾಲಯಕ್ಕೆ ಒಬ್ಬರಿಗಿಂತ ಹೆಚ್ಚು ನ್ಯಾಯಾಧೀಶರನ್ನು ನೇಮಕ ಮಾಡಿದಾಗ ಕೆಲಸದ ಹಂಚಿಕೆ | 4 |
| 10. | ನ್ಯಾಯಾಲಯಗಳ ಸ್ಥಳ | 4 |
| 11. | ನ್ಯಾಯಾಲಯಗಳ ಮೊಹರು | 4 |
| 12. | ಅಸ್ತಿತ್ವದಲ್ಲಿರುವ ನ್ಯಾಯಾಲಯಗಳನ್ನು ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ನ್ಯಾಯಾಲಯಗಳೆಂದು ಭಾವಿಸತಕ್ಕದ್ದ | 5 |


### ಅಧ್ಯಾಯ–III

### ಅಧಿಕಾರ ವ್ಯಾಪ್ತಿ


| | | |
|---|---|---|
| 13. | ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು | 5 |
| 14. | ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿ | 6 |
| 15. | ಜಿಲ್ಲಾ ನ್ಯಾಯಾಲಯದಿಂದ ಅಧೀನ ನ್ಯಾಯಾಲಯಗಳ ನಿಯಂತ್ರಣ | 6 |
| 16. | ಸಿವಿಲ್ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿ | 6 |
| 17. | ಮುನ್ಸಿಫನ ಅಧಿಕಾರ ವ್ಯಾಪ್ತಿ | 7 |
| 18. | ಜಿಲ್ಲಾ ನ್ಯಾಯಾಲಯಗಳ ಮೇಲೆ ಅಪೀಲುಗಳು | 7 |
| 19. | ಸಿವಿಲ್ ನ್ಯಾಯಾಧೀಶನ ಮೇಲೆ ಅಪೀಲುಗಳು | 7 |
| 20. | ಮುನ್ಸಿಫನ ಮೇಲೆ ಅಪೀಲುಗಳು | 7 |
| 21. | ಲಘು ವಿವಾದಗಳ ನ್ಯಾಯಾಲಯ ನ್ಯಾಯಾಧೀಶನ ಅಪೀಲು ಅಧಿಕಾರ ವ್ಯಾಪ್ತಿ | 8 |

ಪುಟಗಳು

22. ಲಘು ವಿವಾದಗಳ ಅಧಿಕಾರಗಳನ್ನು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಮತ್ತು ಮುನ್ಸೀಫನ ನ್ಯಾಯಾಲಯದಲ್ಲಿ ನಿಹಿತಗೊಳಿಸುವ ಅಧಿಕಾರ 8

23. ಕೆಲವು ಅಧಿನಿಯಮಗಳ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಸಿವಿಲ್ ನ್ಯಾಯಾಧೀಶನಲ್ಲಿ ನಿಹಿತಗೊಳಿಸಲು ಅಧಿಕಾರ 87

23ಕ. ಭಾರತ ಉತ್ತರಾಧಿಕಾರ ಅಧಿನಿಯಮ, 1925ರ ಮೇರೆಗೆ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅಧೀನ ನ್ಯಾಯಾಲಯದಲ್ಲಿ ನಿಹಿತಗೊಳಿಸುವುದು 9

24. ನ್ಯಾಯಾಧೀಶರು ಅವರು ಹಿತಾಸಕ್ತಿ ಹೊಂದಿರುವಂಥ ದಾವೆಗಳನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ ಮತ್ತು ಅವರು ಇತರ ಅಧಿಕಾರ ಬಲಗಳಲ್ಲಿ ಅವರು ಮಾಡಿದ ಡಿಕ್ರಿಗಳಿಂದ ಅಪೀಲುಗಳನ್ನು ಅಧಿವಿಚಾರಣೆ ಮಾಡತಕ್ಕದ್ದ 10

**ಅಧ್ಯಾಯ–IV**

**ಸಂಕೀರ್ಣ**

25. ಜಿಲ್ಲಾ ನ್ಯಾಯಾಧೀಶನ ಪದದ ತಾತ್ಕಾಲಿಕ ಪ್ರಭಾರ 10

26. ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನು ಪದವನ್ನು ಖಾಲಿ ಮಾಡಿದ ಮೇಲೆ ವ್ಯವಹರಣೆಗಳ ವರ್ಗಾವಣೆ 11

27. ನಿಯಮಗಳನ್ನು ರಚಿಸಲು ಉಚ್ಚನ್ಯಾಯಾಲಯದ ಅಧಿಕಾರ 12

28. ದೀರ್ಘ ರಜೆ 12

29. ನಿರಸನ ಮತ್ತು ಉಳಿಸುವಿಕೆಗಳು 14

30. ಜಾರಿಯಲ್ಲಿರುವ ಇತರ ಕೆಲವು ಕಾನೂನುಗಳಲ್ಲಿನ ಇತರ ಪದಗಳ ಬದಲಾಗಿ "ಸಿವಿಲ್ ನ್ಯಾಯಾಧೀಶ" ಮತ್ತು "ಮುನ್ಸೀಫ್" ಎಂಬ ಪದದ ಪ್ರತ್ಯಾಯೋಜನೆ 17

ಅನುಸೂಚಿ 18

## ಕರ್ನಾಟಕ ಅಧಿನಿಯಮ, 1964ರ ಸಂಖ್ಯೆ 21

(1964ನೇಯ ಇಸ್ವಿಯ ಏಪ್ರಿಲ್ ಒಂಬತ್ತನೆಯ ದಿನಾಂಕದಂದು ಕರ್ನಾಟಕ ರಾಜಪತ್ರದಲ್ಲಿ ಮೊದಲು ಪ್ರಕಟಿತವಾಯಿತು,)

## ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964

(1964ರ ಮಾರ್ಚ್ ಇಪ್ಪತ್ತೆಂಟನೆಯ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

(1965ರ 11, 1976ರ 81, 1978ರ 8, 1978ರ 28, 1980ರ 13, 1981ರ 11, 1985ರ 26ನೇ ನಂಬರಿನ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ)

ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ಸಿವಿಲ್ ನ್ಯಾಯಾಲಯಗಳ ರಚನೆ, ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟ ಏಕರೂಪದ ಕಾನೂನಿಗಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ಸಿವಿಲ್ ನ್ಯಾಯಾಲಯಗಳ ರಚನೆ, ಅಧಿಕಾರಗಳು ಮತ್ತು ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟ ಏಕರೂಪದ ಕಾನೂನಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ ;

ಭಾರತ ಗಣರಾಜ್ಯದ ಹದಿನಾಲ್ಕುನೆಯ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

### ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ಎಂದು ಕರೆಯತಕ್ಕದ್ದು.

(2) ಇದು ಬೆಂಗಳೂರು ನಗರವನ್ನು ಹೊರತುಪಡಿಸಿ ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) **"ಗೊತ್ತುಪಡಿಸಿದ ದಿವಸ"** ಎಂದರೆ, 1ನೇಯ ಪ್ರಕರಣದ (3)ನೇಯ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ದಿನಾಂಕ ;

(ಕಕ) **"ಬೆಂಗಳೂರು ನಗರ"**ವು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯ ಅಧಿನಿಯಮ, 1979ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರತಕ್ಕದ್ದು;

(ಖ) **"ಸಿವಿಲ್ ನ್ಯಾಯಾಲಯ"** ಎಂದರೆ, ಜಿಲ್ಲಾ ನ್ಯಾಯಾಲಯ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಅಥವಾ ಮುನ್ಸಿಫನ ನ್ಯಾಯಾಲಯ;

(ಗ) **"ಜಿಲ್ಲೆ"** ಎಂದರೆ ರೆವಿನ್ಯೂ ಜಿಲ್ಲೆ ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಜಿಲ್ಲೆಯೆಂದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಸ್ಥಳೀಯ ಪ್ರದೇಶ ;

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ ಬೆಂಗಳೂರು ರೆವಿನ್ಯೂ ಜಿಲ್ಲೆಯ ಬೆಂಗಳೂರು ನಗರವನ್ನು ಹೊರತುಪಡಿಸಿದ್ದಾಗಿರತಕ್ಕದ್ದು.

(ಫ) **"ಉಚ್ಚ ನ್ಯಾಯಾಲಯ"** ಎಂದರೆ, ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯ;

(ಜ) **"ಅಧಿಸೂಚನೆ"** ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ;

(ಚ) **"ನಿಯಮಿಸಲಾದುದು"** ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ – II

## ಸಿವಿಲ್ ನ್ಯಾಯಾಲಯಗಳ ಸ್ಥಾಪನೆ ಮತ್ತು ರಚನೆ

**3. ಸಿವಿಲ್ ನ್ಯಾಯಾಲಯಗಳ ವರ್ಗ ಮತ್ತು ಹೆಸರು.–** ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿರುವ ಸಿವಿಲ್ ನ್ಯಾಯಾಲಯಗಳ ಮೂರು ವರ್ಗಗಳು ಇರತಕ್ಕದ್ದು, ಎಂದರೆ, (1) ಜಿಲ್ಲಾ ನ್ಯಾಯಾಲಯ ; (2) ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ; ಮತ್ತು (3) ಮುನ್ಸೀಫನ ನ್ಯಾಯಾಲಯ.

**4. ಜಿಲ್ಲೆಗಾಗಿ ಜಿಲ್ಲಾ ನ್ಯಾಯಾಲಯದ ಸ್ಥಾಪನೆ.–** (1) ಪ್ರತಿಯೊಂದು ಜಿಲ್ಲೆಗಾಗಿ ಒಂದು ಜಿಲ್ಲಾ ನ್ಯಾಯಾಲಯವು ಇರತಕ್ಕದ್ದು.

ಪರಂತು, ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿಗಾಗಿ ಒಂದು ಜಿಲ್ಲಾ ನ್ಯಾಯಾಲಯವನ್ನು ಸ್ಥಾಪಿಸಬಹುದು.

(2) ಪ್ರತಿಯೊಂದು ಜಿಲ್ಲಾ ನ್ಯಾಯಾಲಯಕ್ಕೆ ಜಿಲ್ಲಾ ನ್ಯಾಯಾಧೀಶನು ಅಧ್ಯಕ್ಷನಾಗಿರತಕ್ಕದ್ದು.

**5. ಅಡಿಷನಲ್ ಜಿಲ್ಲಾ ನ್ಯಾಯಾಧೀಶರ ನೇಮಕಾತಿ.–** (1) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದ ಶಿಫಾರಸ್ಸಿನ ಮೇಲೆ ಜಿಲ್ಲಾ ನ್ಯಾಯಾಲಯಕ್ಕೆ ತಾನು ಅವಶ್ಯಕವೆಂದು ಭಾವಿಸುವಂಥ ಅವಧಿಗಾಗಿ ಒಬ್ಬ ಅಥವಾ ಹೆಚ್ಚು ಅಡಿಷನಲ್ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಬಹುದು.

(2) ಹಾಗೆ ನೇಮಕಗೊಂಡ ಅಡಿಷನಲ್ ಜಿಲ್ಲಾ ನ್ಯಾಯಾಧೀಶನು, ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು, ಜಿಲ್ಲಾ ನ್ಯಾಯಾಧೀಶನು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಜಿಲ್ಲಾ ನ್ಯಾಯಾಧೀಶನು ಅವನಿಗೆ ವಹಿಸಿಕೊಡಬಹುದಾದಂಥ ಜಿಲ್ಲಾ ನ್ಯಾಯಾಧೀಶನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು ಮತ್ತು ಆ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ, ಅವನು ಜಿಲ್ಲಾ ನ್ಯಾಯಾಧೀಶನಂತೆ ಅದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**6. ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳ ಸ್ಥಾಪನೆ.–** (1) ಪ್ರತಿಯೊಂದು ಜಿಲ್ಲೆಗೆ ಒಂದು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವು ಇರತಕ್ಕದ್ದ :

ಪರಂತು, ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಸಂದರ್ಭಾನುಸಾರ ಜಿಲ್ಲೆಯ ಭಾಗಕ್ಕೆ ಅಥವಾ ಒಂದಕ್ಕಿಂತ ಹೆಚ್ಚು ಜಿಲ್ಲೆಗಳಿಗೆ ಒಂದು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವನ್ನು ಸ್ಥಾಪಿಸಬಹುದು.

(2) ಪ್ರತಿಯೊಂದು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಸಿವಿಲ್ ನ್ಯಾಯಾಧೀಶನು ಅಧ್ಯಕ್ಷನಾಗಿರತಕ್ಕದ್ದು.

**7. ಮುನ್ಸೀಫರುಗಳ ನ್ಯಾಯಾಲಯಗಳ ಸ್ಥಾಪನೆ.–** (1) ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರದವರು ನಿಗದಿ ಮಾಡಬಹುದಾದಂತೆ ಪ್ರತಿಯೊಂದು ಜಿಲ್ಲೆಯಲ್ಲಿ ಅಂಥ ಸಂಖ್ಯೆಯ ಮುನ್ಸೀಫರ ನ್ಯಾಯಾಲಯಗಳು ಇರತಕ್ಕದ್ದು.

(2) ಪ್ರತಿಯೊಂದು ಮುನ್ಸೀಫನ ನ್ಯಾಯಾಲಯಕ್ಕೆ ಮುನ್ಸೀಫನು ಅಧ್ಯಕ್ಷನಾಗಿರತಕ್ಕದ್ದು.

**8. ಸಿವಿಲ್ ನ್ಯಾಯಾಧೀಶನ ಅಥವಾ ಮುನ್ಸೀಫನ ನ್ಯಾಯಾಲಯಕ್ಕೆ ಸಿವಿಲ್ ನ್ಯಾಯಾಧೀಶರ ಮತ್ತು ಮುನ್ಸೀಫರ ಸಂಖ್ಯೆ.–** ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ನೇಮಕ ಮಾಡಬೇಕಾದ ಸಿವಿಲ್ ನ್ಯಾಯಾಧೀಶರ ಸಂಖ್ಯೆ ಮತ್ತು ಮುನ್ಸೀಫನೆ ನ್ಯಾಯಾಲಯಕ್ಕೆ ನೇಮಕ ಮಾಡಬೇಕಾದ ಮುನ್ಸೀಫರ ಸಂಖ್ಯೆಯನ್ನು ಅಧಿಸೂಚನೆಯ ಮೂಲಕ ನಿಗದಿಪಡಿಸಬಹುದು ಮತ್ತು ಕಾಲಕಾಲಕ್ಕೆ ಅದನ್ನು ವ್ಯತ್ಯಾಸಗೊಳಿಸಬಹುದು.

**9. ನ್ಯಾಯಾಲಯಕ್ಕೆ ಒಬ್ಬನಿಗಿಂತ ಹೆಚ್ಚು ನ್ಯಾಯಾಧೀಶನನ್ನು ನೇಮಕ ಮಾಡಿದಾಗ ಕೆಲಸದ ಹಂಚಿಕೆ.–** (1) ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಒಬ್ಬನಿಗಿಂತ ಹೆಚ್ಚು ಸಿವಿಲ್ ನ್ಯಾಯಾಧೀಶರನ್ನು ಮತ್ತು ಮುನ್ಸಿಫ ನ್ಯಾಯಾಲಯಕ್ಕೆ ಒಬ್ಬನಿಗಿಂತ ಹೆಚ್ಚು ಮುನ್ಸೀಫರನ್ನು ನೇಮಕ ಮಾಡಿದಾಗ; ಸಿವಿಲ್ ನ್ಯಾಯಾಧೀಶರ ಪೈಕಿ ಒಬ್ಬನನ್ನು ಅಥವಾ ಮುನ್ಸೀಫರ ಪೈಕಿ ಒಬ್ಬನನ್ನು ಸಂದರ್ಭಾನುಸಾರ ಪ್ರಧಾನ ಸಿವಿಲ್ ನ್ಯಾಯಾಧೀಶನ ಅಥವಾ ಪ್ರಧಾನ ಮುನ್ಸೀಫನನ್ನಾಗಿ ಮತ್ತು ಇತರರನ್ನು ಅಡಿಷನಲ್ ಸಿವಿಲ್ ನ್ಯಾಯಾಧೀಶರನ್ನಾಗಿ ಅಥವಾ ಅಡಿಷನಲ್ ಮುನ್ಸೀಫರನ್ನಾಗಿ ನೇಮಕ ಮಾಡತಕ್ಕದ್ದು.

(2) ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಅಥವಾ ಮುನ್ಸೀಫನ ನ್ಯಾಯಾಲಯಕ್ಕೆ ನೇಮಕಗೊಂಡ ನ್ಯಾಯಾಧೀಶರ ಪೈಕಿ ಪ್ರತಿಯೊಬ್ಬನು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಂಥ ನ್ಯಾಯಾಲಯಕ್ಕೆ ಪ್ರದತ್ತವಾದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಬಹುದು.

(3) ಜಿಲ್ಲಾ ನ್ಯಾಯಾಧೀಶನ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೆ ಒಳಪಟ್ಟು ಪ್ರಧಾನ ಸಿವಿಲ್ ನ್ಯಾಯಾಧೀಶನು ಅಥವಾ ಪ್ರಧಾನ ಮುನ್ಸೀಫನು ಕಾಲಕಾಲಕ್ಕೆ ಅದರ ಹಲವಾರು ಸಿವಿಲ್ ನ್ಯಾಯಾಧೀಶರಲ್ಲಿ ಅಥವಾ ಮುನ್ಸೀಫರಲ್ಲಿ ನ್ಯಾಯಾಲಯದ ಕೆಲಸದ ಹಂಚಿಕೆಗಾಗಿ, ತಾನು ಸೂಕ್ತವೆಂದು ಯೋಚಿಸುವಂಥ ವ್ಯವಸ್ಥೆಗಳನ್ನು ಮಾಡಬಹುದು.

**10. ನ್ಯಾಯಾಲಯಗಳ ಸ್ಥಳ.–** (1) ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ಸಿವಿಲ್ ನ್ಯಾಯಾಲಯವನ್ನು ನಡೆಸತಕ್ಕಂಥ ಸ್ಥಳ ಅಥವಾ ಸ್ಥಳಗಳನ್ನು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ರಾಜ್ಯ ಸರ್ಕಾರವು, ನಿಗದಿಪಡಿಸತಕ್ಕದ್ದು ಮತ್ತು ಕಾಲ ಕಾಲಕ್ಕೆ ಅದನ್ನು ಬದಲಾಯಿಸಬಹುದು.

(2) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಯಾವ ಸ್ಥಳಗಳಲ್ಲಿ ಸದರಿ ನ್ಯಾಯಾಲಯವನ್ನು ನಡೆಸಲಾಗುತ್ತಿತ್ತೋ ಆ ಸ್ಥಳಗಳನ್ನು (1)ನೇಯ ಉಪ ಪ್ರಕರಣದ ಮೇರೆಗೆ ಆದೇಶವನ್ನು ಮಾಡುವವರೆಗೆ, (1)ನೇಯ ಉಪಪ್ರಕರಣದ ಮೇರೆಗೆ ನಿಗದಿಪಡಿಸಿದ ಸ್ಥಳಗಳೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಯಾವುದೇ ನ್ಯಾಯಾಲಯಕ್ಕಾಗಿ ನಿಗದಿಪಡಿಸಿದ ಸ್ಥಳಗಳು, ಆ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಇರುವುದಾಗಿ ಭಾವಿಸತಕ್ಕದ್ದು.

**11. ನ್ಯಾಯಾಲಯಗಳ ಮೊಹರು.–** ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ಸಿವಿಲ್ ನ್ಯಾಯಾಲಯವು ಕರ್ನಾಟಕ ರಾಜ್ಯದ ಲಾಂಛನವನ್ನು ಹೊಂದಿರುವಂಥ ಮೊಹರನ್ನು ಉಪಯೋಗಿಸತಕ್ಕದ್ದು ಮತ್ತು ಅದು ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ರೂಪ, ಅಂಥ ಉದ್ದಗಲಗಳಲ್ಲಿ ಮತ್ತು ಅಂಥ ಭಾಷೆಯಲ್ಲಿ ನ್ಯಾಯಾಲಯದ ಹೆಸರಿನೊಂದಿಗೆ ಇರತಕ್ಕದ್ದು :

ಪರಂತು, ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ, ಅಂಥ ಪ್ರತಿಯೊಂದು ಸಿವಿಲ್ ನ್ಯಾಯಾಲಯದಲ್ಲಿ ಉಪಯೋಗದಲ್ಲಿರುವ ಮೊಹರುಗಳನ್ನು, ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಆದೇಶವನ್ನು ಮಾಡುವವರೆಗೆ ಉಪಯೋಗಿಸುವುದು ಮುಂದುವರಿಯಬಹುದು.

**12. ಅಸ್ತಿತ್ವದಲ್ಲಿರುವ ನ್ಯಾಯಾಲಯಗಳನ್ನು ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ನ್ಯಾಯಾಲಯಗಳೆಂದು ಭಾವಿಸತಕ್ಕದ್ದು.–** (1) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಜಿಲ್ಲಾ ನ್ಯಾಯಾಲಯಗಳನ್ನು

ಈ ಅಧಿನಿಯಮಕ್ಕೆ ಅನುಸಾರವಾಗಿ ಅವುಗಳನ್ನು ಪುನರಚಿಸುವವರೆಗೆ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಜಿಲ್ಲಾ ನ್ಯಾಯಾಲಯಗಳೆಂದು ಭಾವಿಸತಕ್ಕದ್ದು,

(2) ಗೊತ್ತುಪಡಿಸಿದ ದಿವಸಕ್ಕೆ ನಿಕಟಪೂರ್ವದಲ್ಲಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಈ ಕೆಳಕಂಡ ನ್ಯಾಯಾಲಯಗಳನ್ನು ಎಂದರೆ,–

(ಕ) ಮುಂಬಯಿ ಪ್ರದೇಶದಲ್ಲಿ, ಸಿವಿಲ್ ನ್ಯಾಯಾಧೀಶರ (ಜೇಷ್ಠ ವಿಭಾಗ) ನ್ಯಾಯಾಲಯಗಳು ;

(ಖ) ಮೈಸೂರು ಪ್ರದೇಶದಲ್ಲಿನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಮತ್ತು

(ಗ) ಅಧೀನ ನ್ಯಾಯಾಧೀಶರ ನ್ಯಾಯಾಲಯಗಳು,

– ಈ ಅಧಿನಿಯಮದ ಮೇರೆಗೆ ಸ್ಥಾಪಿಸಿದ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳೆಂದು ಭಾವಿಸತಕ್ಕದ್ದು,

(3) ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಅಸ್ತಿತ್ವದಲ್ಲಿರುವ ಈ ಕೆಳಕಂಡ, ನ್ಯಾಯಾಲಯಗಳನ್ನು ಎಂದರೆ–

(ಕ) ಮುಂಬಯಿ ಪ್ರದೇಶದಲ್ಲಿನ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯಗಳು ;

(ಖ) ಮೈಸೂರು ಪ್ರದೇಶದಲ್ಲಿ, ಹೈದರಾಬಾದು ಪ್ರದೇಶದಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿನ ಮುನ್ಸೀಫರ ನ್ಯಾಯಾಲಯಗಳು ಮತ್ತು

(ಗ) ಮದ್ರಾಸ್ ಪ್ರದೇಶದಲ್ಲಿನ ಜಿಲ್ಲಾ ಮುನ್ಸೀಫರ ನ್ಯಾಯಾಲಯಗಳು ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಮುನ್ಸೀಫರ ನ್ಯಾಯಾಲಯಗಳೆಂದು ಭಾವಿಸತಕ್ಕದ್ದು.

## ಅಧ್ಯಾಯ – III

## ಅಧಿಕಾರ ವ್ಯಾಪ್ತಿ

**13. ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು.**– (1) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಮತ್ತು ಈ ಅಧಿನಿಯಮದ 4ನೇಯ ಪ್ರಕರಣದ ಮತ್ತು 6ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ಯಾವುದೇ ಜಿಲ್ಲಾ ನ್ಯಾಯಾಲಯದ ಅಥವಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಅದನ್ನು ವ್ಯತ್ಯಾಸಗೊಳಿಸಬಹುದು.

(2) ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ ಈ ಅಧಿನಿಯಮದ ಮೇರೆಗೆ ಯಾವುದೇ ಮುನ್ಸೀಫನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ನಿಗದಿಪಡಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಅದನ್ನು ವ್ಯತ್ಯಾಸಗೊಳಿಸಬಹುದು.

(3) (1)ನೇಯ ಉಪಪ್ರಕರಣದ ಅಥವಾ (2)ನೇಯ ಉಪ ಪ್ರಕರಣದ ಮೇರೆಗೆ ಅಧಿಸೂಚನೆಗಳನ್ನು ಹೊರಡಿಸುವವರೆಗೆ, ಪ್ರತಿಯೊಂದು ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಅಸ್ತಿತ್ವದಲ್ಲಿರುವ ಸ್ಥಳೀಯ ಪರಿಮಿತಿಗಳನ್ನು ಈ ಅಧಿನಿಯಮದ ಮೇರೆಗೆ ನಿಗದಿಪಡಿಸಿರುವುದಾಗಿ ಭಾವಿಸತಕ್ಕದ್ದು.

(4) ಯಾವುದೇ ಜಿಲ್ಲಾ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳನ್ನು (1)ನೇ ಉಪ ಪ್ರಕರಣ ಅಥವಾ (2)ನೇ ಉಪ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಮೂಲಕ ವ್ಯತ್ಯಾಸಗೊಳಿಸಿದಲ್ಲಿ ಉಚ್ಚ ನ್ಯಾಯಾಲಯವು, ಯಾವುದೇ ಅಂಥ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ದಾವೆಗಳು, ಅರ್ಜಿಗಳು, ಅಪೀಲುಗಳು ಮತ್ತು ಇತರ ವ್ಯವಹರಣೆಗಳ ವರ್ಗಾವಣೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಆದೇಶಗಳನ್ನು ಮಾಡಬಹುದು.

**14. ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿ.–** (1) ಜಿಲ್ಲಾ ನ್ಯಾಯಾಲಯವನ್ನು, ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ, ಅಸಲು ಅಧಿಕಾರ ವ್ಯಾಪ್ತಿಯ ಪ್ರಧಾನ ಸಿವಿಲ್ ನ್ಯಾಯಾಲಯ ಎಂದು ಭಾವಿಸತಕ್ಕದ್ದು.

(2) ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ (1908ರ 5ನೇ ಕೇಂದ್ರ ಅಧಿನಿಯಮ) ಉಪಬಂಧಗಳಿಗೆ ಒಳಪಟ್ಟು ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಸಿವಿಲ್ ಸ್ವರೂಪದ ಎಲ್ಲಾ ಅಸಲು ದಾವೆಗಳಿಗೆ ಮತ್ತು ವ್ಯವಹರಣೆಗಳಿಗೆ ವ್ಯಾಪ್ತವಾಗತಕ್ಕದ್ದು.

**15. ಜಿಲ್ಲಾ ನ್ಯಾಯಾಲಯದಿಂದ ಅಧೀನ ನ್ಯಾಯಾಲಯಗಳ ನಿಯಂತ್ರಣ.–** ಜಿಲ್ಲಾ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಸಾಮಾನ್ಯ ನಿಯಂತ್ರಣಕ್ಕೆ ಒಳಪಟ್ಟು, ಅದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗಿನ ಇತರ ಎಲ್ಲಾ ಸಿವಿಲ್ ನ್ಯಾಯಾಲಯಗಳ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು.

**16. ಸಿವಿಲ್ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿ.–** ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು, ಸಿವಿಲ್ ಸ್ವರೂಪದ ಎಲ್ಲ ಅಸಲು ದಾವೆಗಳಿಗೆ ಮತ್ತು ವ್ಯವಹರಣೆಗಳಿಗೆ ವ್ಯಾಪ್ತವಾಗತಕ್ಕದ್ದು.

**17. ಮುನ್ಸೀಫನ ಅಧಿಕಾರ ವ್ಯಾಪ್ತಿ.–** ಮುನ್ಸೀಫನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು ಮುನ್ಸೀಫನ ಅಧಿಕಾರ ವ್ಯಾಪ್ತಿಯಿಂದ ಅನ್ಯತಾ ಹೊರತುಪಡಿಸಿರದ, ಹತ್ತು ಸಾವಿರ ರೂಪಾಯಿಗಳಿಗೆ ಮೀರದ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯದ ಸಿವಿಲ್ ಸ್ವರೂಪದ ಎಲ್ಲ ಅಸಲು ದಾವೆಗಳಿಗೆ ಮತ್ತು ವ್ಯವಹರಣೆಗಳಿಗೆ ವ್ಯಾಪ್ತವಾಗತಕ್ಕದ್ದು.

**18. ಜಿಲ್ಲಾ ನ್ಯಾಯಾಲಯಗಳ ಮೇಲೆ ಅಪೀಲುಗಳು.–** ಸಿವಿಲ್ ಸ್ವರೂಪದ ಅಸಲು ದಾವೆಗಳು ಮತ್ತು ವ್ಯವಹರಣೆಗಳಲ್ಲಿ ಜಿಲ್ಲಾ ನ್ಯಾಯಾಲಯವು ಮಾಡಲಾದ ಡಿಕ್ರಿಗಳ ಮತ್ತು ಆದೇಶಗಳಿಂದ ಕಾನೂನು ಮೂಲಕ ಅಂಥ ಅಪೀಲುಗಳಿಗೆ ಅವಕಾಶವಿರುವಾಗ ಉಚ್ಚ ನ್ಯಾಯಾಲಯಕ್ಕೆ ಅಪೀಲುಗಳು ಇರತಕ್ಕದ್ದು.

**19. ಸಿವಿಲ್ ನ್ಯಾಯಾಧೀಶನ ಮೇಲೆ ಅಪೀಲುಗಳು.–** ಸಿವಿಲ್ ಸ್ವರೂಪದ ಅಸಲು ದಾವೆಗಳು ಮತ್ತು ವ್ಯವಹರಣೆಗಳಲ್ಲಿ ಸಿವಿಲ್ ನ್ಯಾಯಾಧೀಶನು ಮಾಡಿದ ಡಿಕ್ರಿಗಳು ಮತ್ತು ಆದೇಶಗಳಿಂದ ಕಾನೂನಿನ ಮೂಲಕ ಅಂಥ ಅಪೀಲುಗಳಿಗೆ ಅವಕಾಶವಿರುವಾಗ ಅಪೀಲುಗಳು–

(1) ಅಸಲು ದಾವೆ ಅಥವಾ ವ್ಯವಹರಣೆಯ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರುವಾಗ ಜಿಲ್ಲಾ ನ್ಯಾಯಾಲಯಕ್ಕೆ;

(2) ಇತರ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಕ್ಕೆ;

– ಇರತಕ್ಕದ್ದು.

**20. ಮುನ್ಸೀಫನ ಮೇಲೆ ಅಪೀಲುಗಳು.–** (i) ಸಿವಿಲ್ ಸ್ವರೂಪದ ಅಸಲು ದಾವೆಗಳು ಮತ್ತು ವ್ಯವಹರಣೆಗಳಲ್ಲಿ ಮುನ್ಸೀಫನು ಮಾಡಿದ ಡಿಕ್ರಿಗಳು ಮತ್ತು ಆದೇಶಗಳಿಂದ, ಕಾನೂನು ಮೂಲಕ ಅಂಥ ಅಪೀಲುಗಳಿಗೆ ಅವಕಾಶವಿರುವಲ್ಲಿ–

(i) ಅಸಲು ದಾವೆ ಅಥವಾ ವ್ಯವಹರಣೆಯ ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಐದು ಸಾವಿರ ರೂಪಾಯಿಗಳಿಗೆ ಹೆಚ್ಚಿಲ್ಲದಿದ್ದರೆ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ;

(ii) ಇತರ ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ–

ಅಪೀಲು ಇರತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಆದರೆ ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಜಿಲ್ಲಾ ನ್ಯಾಯಾಲಯವು ಯಾವುದೇ ಹಂತದಲ್ಲಿ ಅದಕ್ಕೆ ಅಧೀನನಾಗಿರುವ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಅಪೀಲನ್ನು

ಹಿಂತೆಗೆದುಕೊಳ್ಳಬಹುದು ಮತ್ತು ಅದನ್ನು ವಿಲೇ ಮಾಡಬಹುದು ಮತ್ತು ಅಂಥ ಅಪೀಲಿನ ಸಂಬಂಧದಲ್ಲಿ ಜಿಲ್ಲಾ ನ್ಯಾಯಾಲಯವನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಸಕ್ಷಮ ಅಪೀಲು ನ್ಯಾಯಾಲಯವೆಂದು ಭಾವಿಸತಕ್ಕದ್ದು.

**21. ಲಘು ವಿವಾದಗಳ ನ್ಯಾಯಾಲಯಗಳ ನ್ಯಾಯಾಧೀಶನ ಅಪೀಲು ಅಧಿಕಾರ ವ್ಯಾಪ್ತಿ.–** ಉಚ್ಚ ನ್ಯಾಯಾಲಯವು ಅಧಿಸೂಚನೆ ಮೂಲಕ ಕರ್ನಾಟಕ ಲಘು ವಿವಾದಗಳ ನ್ಯಾಯಾಲಯಗಳ ಅಧಿನಿಯಮ 1964ರ ಮೇರೆಗೆ ಸ್ಥಾಪಿಸಿದ ಲಘು ವಿವಾದಗಳ ನ್ಯಾಯಾಲಯದ ಯಾವನೇ ನ್ಯಾಯಾಧೀಶನಲ್ಲಿ ಜಿಲ್ಲಾ ನ್ಯಾಯಾಧೀಶನು ಅವನಿಗೆ ಒಪ್ಪಿಸಬಹುದಾದಂಥ ಮುನ್ಸೀಫನ ನ್ಯಾಯಾಲಯದ ಡಿಕ್ರಿ ಅಥವಾ ಆದೇಶಗಳಿಂದ ಅಪೀಲುಗಳನ್ನು ಸುನಾವಣೆ ಮಾಡುವ ಅಧಿಕಾರಗಳನ್ನು ನಿಹಿತಗೊಳಿಸಹುದು.

**22. ಲಘು ವಿವಾದಗಳ ಅಧಿಕಾರಗಳನ್ನು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಮತ್ತು ಮುನ್ಸೀಫನ ನ್ಯಾಯಾಲಯದಲ್ಲಿ ನಿಹಿತಗೊಳಿಸುವ ಅಧಿಕಾರ.–** (1) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ಅದು ಕಾಲಕಾಲಕ್ಕೆ ನಿರ್ಧರಿಸತಕ್ಕಂತೆ ಅಂಥ ಪರಿಮಿತಿಗಳೊಳಗೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಸಂದರ್ಭದಲ್ಲಿ ಮೂರು ಸಾವಿರ ರೂಪಾಯಿಗಳಿಗೆ ಮತ್ತು ಮುನ್ಸೀಫನ ನ್ಯಾಯಾಲಯದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳಿಗೆ ಮೀರದಂತೆ ಅದು ಸರಿಯೆಂದು ಭಾವಿಸಬಹುದಾದಂಥ ಮೊಬಲಗಿನವರೆಗೆ ಲಘು ವಿವಾದಗಳ ನ್ಯಾಯಾಲಯದಿಂದ ಸಂಜ್ಞೇಯವಾಗಬಹುದಾದ ದಾವೆಗಳ ಅಧಿವಿಚಾರಣೆಗಾಗಿನ ಅಧಿಕಾರ ವ್ಯಾಪ್ತಿಯನ್ನು ಸಿವಿಲ್ ನ್ಯಾಯಾಧೀಶನ ಯಾವುದೇ ನ್ಯಾಯಾಲಯ ಅಥವಾ ಮುನ್ಸೀಫನ ನ್ಯಾಯಾಲಯದಲ್ಲಿ ನಿಹಿತಗೊಳಿಸಬಹುದು.

(2) ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ ಹಾಗೆ ತನಗೆ ನಿಹಿತಗೊಳಿಸಿದ ಸಿವಿಲ್ ನ್ಯಾಯಾಧೀಶನ ಯಾವುದೇ ನ್ಯಾಯಾಲಯ ಅಥವಾ ಮುನ್ಸೀಫನ ನ್ಯಾಯಾಲಯದ ಅಂಥ ಅಧಿಕಾರ ವ್ಯಾಪ್ತಿಯನ್ನು ತಾನು ಯೋಗ್ಯವೆಂದು ಯೋಚಿಸಿದಾಗಲೆಲ್ಲಾ, ಹಿಂತೆಗೆದುಕೊಳ್ಳಬಹುದು ಅಥವಾ ವ್ಯತ್ಯಾಸಗೊಳಿಸಬಹುದು.

**23. ಕೆಲವು ಅಧಿನಿಯಮಗಳ ಮೇರೆಗೆ ಅಧಿಕಾರ ವ್ಯಾಪ್ತಿಯನ್ನು ಸಿವಿಲ್ ನ್ಯಾಯಾಧೀಶನಲ್ಲಿ ನಿಹಿತಗೊಳಿಸಲು ಅಧಿಕಾರ.–** (1) ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಮತ್ತು ಅಂಥ ಆರ್ಥಿಕ ಪರಿಮಿತಿಗೆ ಒಳಪಟ್ಟು ಈ ಕೆಳಕಂಡ ಅಧಿನಿಯಮಗಳ ಮೇರೆಗೆ ಸಂದರ್ಭಾನುಸಾರ ಜಿಲ್ಲಾ ನ್ಯಾಯಾಧೀಶ ಅಥವಾ ಜಿಲ್ಲಾ ನ್ಯಾಯಾಲಯದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಯಾವನೇ ಆ ಸಿವಿಲ್ ನ್ಯಾಯಾಧೀಶನಲ್ಲಿ ನಿಹಿತಗೊಳಿಸಬಹುದು, ಎಂದರೆ–

(i) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869 (ಕೇಂದ್ರ ಅಧಿನಿಯಮ, 1869ರ 4);

(ii) ಪಾಲಕರ ಮತ್ತು ಪ್ರತಿಪಾಲಿತರ ಅಧಿನಿಯಮ, 1890 (ಕೇಂದ್ರ ಅಧಿನಿಯಮ, 1890ರ 8);

(iii) ಭಾರತ ಮನೋವಿಕಲತೆಯ ಅಧಿನಿಯಮ, 1912 (ಕೇಂದ್ರ ಅಧಿನಿಯಮ, 1912ರ 4);

(iv) * * * *

(v) ವಿಶೇಷ ವಿವಾಹ ಅಧಿನಿಯಮ, 1954 (ಕೇಂದ್ರ ಅಧಿನಿಯಮ, 1954ರ 43);

(2) (1)ನೇಯ ಉಪ ಪ್ರಕರಣದ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳಿಂದಾಗಿ ಸಿವಿಲ್ ನ್ಯಾಯಾಧೀಶನು ಮಾಡಿದ ಪ್ರತಿಯೊಂದು ಆದೇಶವು–

(i) ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದಾಗ ಜಿಲ್ಲಾ ನ್ಯಾಯಾಲಯಕ್ಕೆ;

(ii) ಮಿಕ್ಕ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯಕ್ಕೆ–

ಅಪೀಲಿಗೆ ಒಳಪಟ್ಟಿರತಕ್ಕದ್ದು.

(3) ಸಿವಿಲ್ ನ್ಯಾಯಾಧೀಶನ ಆದೇಶದಿಂದ (2)ನೇಯ ಉಪಪ್ರಕರಣದ ಮೇರೆಗಿನ ಅಪೀಲಿನಲ್ಲಿ ಮಾಡಿದ ಜಿಲ್ಲಾ ನ್ಯಾಯಾಧೀಶನ ಪ್ರತಿಯೊಂದು ಆದೇಶವು, ಅಪೀಲು ಡಿಕ್ರಿಗಳಿಂದ ಅಪೀಲುಗಳಿಗೆ ಅನ್ವಯವಾಗುವ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರಲ್ಲಿ ಒಳಗೊಂಡ ನಿಯಮಗಳ ಮೇರೆಗೆ, ಉಚ್ಚ ನ್ಯಾಯಾಲಯಕ್ಕೆ ಅಪೀಲಿಗೆ ಒಳಪಟ್ಟಿರತಕ್ಕದ್ದು.

**23ಕ. ಭಾರತ ಉತ್ತರಾಧಿಕಾರ ಅಧಿನಿಯಮ 1925ರ ಮೇರೆಗೆ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅಧೀನ ನ್ಯಾಯಾಲಯಗಳಲ್ಲಿ ನಿಹಿತಗೊಳಿಸುವುದು.–** (1) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಮತ್ತು ಅಂಥ ಆರ್ಥಿಕ ಮತ್ತು ಇತರ ಪರಿಮಿತಿಗಳಿಗೊಳಪಟ್ಟು ಯಾವನೇ ಸಿವಿಲ್ ನ್ಯಾಯಾಧೀಶನ ಅಥವಾ ಮುನ್ಸೀಫನಲ್ಲಿ ಭಾರತ ಉತ್ತರಾಧಿಕಾರ ಅಧಿನಿಯಮ (ಕೇಂದ್ರ ಅಧಿನಿಯಮ, 1925ರ 39) 1925ರ ಮೇರೆಗೆ ಜಿಲ್ಲಾ ನ್ಯಾಯಾಧೀಶನ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ನಿಹಿತಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಕಾರಗಳನ್ನು ನಿಹಿತಗೊಳಿಸಿದ ಯಾವನೇ ಸಿವಿಲ್ ನ್ಯಾಯಾಧೀಶನ ಅಥವಾ ಮುನ್ಸೀಫನು, ಜಿಲ್ಲಾ ನ್ಯಾಯಾಧೀಶನಿಗೆ ಸದರಿ ಅಧಿನಿಯಮದ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವಲ್ಲಿ ಜಿಲ್ಲಾ ನ್ಯಾಯಾಧೀಶನೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಧೀಶನಿಗೆ ಸಂಬಂಧಪಟ್ಟ ಸದರಿ ಅಧಿನಿಯಮದ ಉಪಬಂಧಗಳು, ಸಂದರ್ಭಾನುಸಾರ ಅಂಥ ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನಿಗೆ ಅವನು ಜಿಲ್ಲಾ ನ್ಯಾಯಾಧೀಶನಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

ಪರಂತು, (1)ನೇ ಉಪಪ್ರಕರಣದ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರಗಳಿಂದಾಗಿ, ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನು ಮಾಡಿದ ಪ್ರತಿಯೊಂದು ಆದೇಶವು–

(i) ಮುನ್ಸೀಫನು ಆದೇಶವನ್ನು ಮಾಡಿದಾಗ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ,

(ii) ಸಿವಿಲ್ ನ್ಯಾಯಾಧೀಶನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ,

– ಅಪೀಲಿಗೆ ಒಳಪಟ್ಟಿರತಕ್ಕದ್ದು.

(3) (2)ನೇ ಉಪಪ್ರಕರಣದ ಪರಂತುಕದ ಮೇರೆಗೆ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು, ಅಪೀಲು, ಡಿಕ್ರಿಗಳಿಂದ ಅಪೀಲುಗಳಿಗೆ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರಲ್ಲಿ ಅಡಕಗೊಂಡ ನಿಯಮಗಳ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲಿಗೆ ಒಳಪಟ್ಟಿರತಕ್ಕದ್ದು.

**24. ನ್ಯಾಯಾಧೀಶರು ಅವರು ಹಿತಾಸಕ್ತಿ ಹೊಂದಿರುವಂಥ ದಾವೆಗಳನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ ಮತ್ತು ಅವರು ಇತರ ಅಧಿಕಾರ ಬಲಗಳಲ್ಲಿ ಅವರು ಮಾಡಿದ ಡಿಕ್ರಿಗಳಿಂದ ಅಪೀಲುಗಳನ್ನು ಅಧಿ ವಿಚಾರಣೆ ಮಾಡತಕ್ಕದ್ದಲ್ಲ.–** (1) ಯಾವನೇ ಜಿಲ್ಲಾ ನ್ಯಾಯಾಧೀಶ, ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನು ಅವನು ಪಕ್ಷಕಾರನಾಗಿರುವ ಅಥವಾ ವೈಯಕ್ತಿಕ ಹಿತಾಸಕ್ತಿ, ಹೊಂದಿರುವಂಥ ಯಾವುದೇ ದಾವೆಯ ಅಧಿವಿಚಾರಣೆ ಮಾಡತಕ್ಕದ್ದಲ್ಲ ಅಥವಾ ಅಂಥ ದಾವೆಗೆ ಸಂಬಂಧಿಸಿದ ಅಥವಾ ಅದರಿಂದ ಉದ್ಭವಿಸುವ ಯಾವುದೇ ವ್ಯವಹರಣೆಗಳಲ್ಲಿ ನ್ಯಾಯ ನಿರ್ಣಯವನ್ನು ಮಾಡತಕ್ಕದ್ದಲ್ಲ.

(2) ಯಾವನೇ ಜಿಲ್ಲಾ ನ್ಯಾಯಾಧೀಶ, ಸಿವಿಲ್ ನ್ಯಾಯಾಧೀಶ ಅಥವಾ ಲಘು ವಿವಾದಗಳ ನ್ಯಾಯಾಲಯದ ನ್ಯಾಯಾಧೀಶನು ಇತರ ಯಾವುದೇ ಅಧಿಕಾರ ಬಲದಿಂದ ತಾನು ಮಾಡಿದ ಯಾವುದೇ ಡಿಕ್ರಿ ಅಥವಾ ಆದೇಶದ ವಿರುದ್ಧ ಮಾಡಿದ ಅಪೀಲನ್ನು ಅಧಿ ವಿಚಾರಣೆ ಮಾಡತಕ್ಕದ್ದಲ್ಲ.

(3) ಅಂಥ ಯಾವುದೇ ದಾವೆ, ವ್ಯವಹರಣೆ ಅಥವಾ ಅಪೀಲು ಅಂಥ ಯಾವನೇ ನ್ಯಾಯಾಧೀಶನ ಅಥವಾ ಮುನ್ಸೀಫನ ಮುಂದೆ ಬಂದರೆ, ಅವನು ನಿಕಟವಾಗಿ ಅಧೀನನಾಗಿರುವಂಥ, ಅಂಥ ಯಾವುದೇ ನ್ಯಾಯಾಲಯಕ್ಕೆ ಆ ಸನ್ನಿವೇಶಗಳನ್ನು ವರದಿ ಮಾಡತಕ್ಕದ್ದು.

(4) ವರಿಷ್ಠ ನ್ಯಾಯಾಲಯವು ಆ ತರುವಾಯ, ಸಿವಿಲ್ ಪ್ರಕ್ರಿಯಾ ಸಂಹಿತೆಯ, 1908 (ಕೇಂದ್ರ ಅಧಿನಿಯಮ 1908ರ (5) 24ನೇಯ ಪ್ರಕರಣದ ಮೂಲಕ ನಿಯಮಿಸಲಾದ ರೀತಿಯಲ್ಲಿ ಆ ಪ್ರಕರಣವನ್ನು ವಿಲೇ ಮಾಡತಕ್ಕದ್ದು.

## ಅಧ್ಯಾಯ – IV

## ಸಂಕೀರ್ಣ

**25. ಜಿಲ್ಲಾ ನ್ಯಾಯಾಧೀಶನ ಪದದ ತಾತ್ಕಾಲಿಕ ಪ್ರಭಾರ.–** ಜಿಲ್ಲಾ ನ್ಯಾಯಾಧೀಶನ ಮರಣ, ಅಮಾನತ್ತು, ರಾಜೀನಾಮೆ ಅಥವಾ ತೆಗೆದುಹಾಕುವಿಕೆಯ ಅಥವಾ ಕಾಯಿಲೆಯಿಂದ ಅಥವಾ ಅನ್ಯಥಾ ಅವನ ಕರ್ತವ್ಯಗಳನ್ನು ನೆರವೇರಿಸಲು ಅವನು ಅಸಮರ್ಥನಾಗಿರುವ ಅಥವಾ ರಜೆಯ ಮೇಲಿನ ಅಥವಾ ಯಾವುದೇ ಇತರ ಕಾರಣಕ್ಕಾಗಿ ಅವನ ನ್ಯಾಯಾಲಯವನ್ನು ನಡೆಸುವಂಥ ಸ್ಥಳದಿಂದ ಅವನ ಗೈರುಹಾಜರಿಯ ಸಂದರ್ಭದಲ್ಲಿ, ಸಂದರ್ಭಾನುಸಾರ ಜೇಷ್ಠ ಅಡಿಷನಲ್ ಜಿಲ್ಲಾ ನ್ಯಾಯಾಧೀಶ ಅಥವಾ ಅಡಿಷನಲ್ ಜಿಲ್ಲಾ ನ್ಯಾಯಾಧೀಶನು ಅಥವಾ ಅಡಿಷನಲ್ ಜಿಲ್ಲಾ ನ್ಯಾಯಾಧೀಶನಿಲ್ಲದಿದ್ದರೆ, ಆ ಸ್ಥಳದಲ್ಲಿಯ ನ್ಯಾಯಾಲಯದ ಸಿವಿಲ್ ನ್ಯಾಯಾಧೀಶನು, ಅಲ್ಲಿ ಅವನು ಒಬ್ಬನಿದ್ದರೆ ಮತ್ತು ಅಲ್ಲಿ ಒಬ್ಬನಿಗಿಂತ ಹೆಚ್ಚಿದ್ದರೆ ಪ್ರಧಾನ ಸಿವಿಲ್ ನ್ಯಾಯಾಧೀಶನು ಮತ್ತು ಅಂಥ ಪ್ರಧಾನ ಸಿವಿಲ್ ನ್ಯಾಯಾಧೀಶನು ಗೈರುಹಾಜರಿದ್ದರೆ, ಅದರ ಹಾಜರಿರುವ ಅಡಿಷನಲ್ ಸಿವಿಲ್ ನ್ಯಾಯಾಧೀಶನು ತನ್ನ ಸಾಮಾನ್ಯ ಕರ್ತವ್ಯಗಳನ್ನು ಬಿಟ್ಟುಕೊಡದೆಯೇ ಜಿಲ್ಲಾ ನ್ಯಾಯಾಲಯದ ಪ್ರಭಾರವನ್ನು ವಹಿಸಿಕೊಳ್ಳತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಧೀಶನು ಅಥವಾ ಅದಕ್ಕೆ ಕ್ರಮಬದ್ಧವಾಗಿ ನೇಮಕಗೊಂಡ ನ್ಯಾಯಾಧೀಶನು ಅದನ್ನು ವಹಿಸಿಕೊಳ್ಳುವವರೆಗೆ ಅದರ ಪ್ರಭಾರದಲ್ಲಿ ಮುಂದುವರಿಯತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ನ್ಯಾಯಾಲಯದ ಪ್ರಭಾರದಲ್ಲಿರುವಲ್ಲಿ, ಸಂದರ್ಭಾನುಸಾರ ಜೇಷ್ಠ ಅಡಿಷನಲ್ ಜಿಲ್ಲಾ ನ್ಯಾಯಾಧೀಶ, ಅಡಿಷನಲ್ ಜಿಲ್ಲಾ ನ್ಯಾಯಾಧೀಶ, ಪ್ರಧಾನ ಸಿವಿಲ್ ನ್ಯಾಯಾಧೀಶ, ಅಡಿಷನಲ್ ಸಿವಿಲ್ ನ್ಯಾಯಾಧೀಶನು ಈ ಬಗ್ಗೆ ಹೊರಡಿಸಿದ ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಜಿಲ್ಲಾ ನ್ಯಾಯಾಧೀಶನ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**26. ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನು ಪದವನ್ನು ಖಾಲಿ ಮಾಡಿದ ಮೇಲೆ ವ್ಯವಹರಣೆಗಳ ವರ್ಗಾವಣೆ.–** (1) ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನ ಮರಣ, ಅಮಾನತ್ತು, ರಾಜೀನಾಮೆ ಅಥವಾ ತೆಗೆದು ಹಾಕುವಿಕೆ ಅಥವಾ ಕಾಯಿಲೆಯಿಂದ ಅಥವಾ ಅನ್ಯಥಾ ತನ್ನ ಕರ್ತವ್ಯಗಳನ್ನು ನೆರವೇರಿಸಲು ಅವನು ಅಸಮರ್ಥನಾಗಿರುವ ಅಥವಾ ರಜೆಯ ಮೇಲೆ ಅಥವಾ ಯಾವುದೇ ಇತರ ಕಾರಣಕ್ಕಾಗಿ ನ್ಯಾಯಾಲಯವು ಇರುವಂಥ ಸ್ಥಳದಿಂದ ಅವನ ಗೈರುಹಾಜರಿಯ ಸಂದರ್ಭದಲ್ಲಿ, ಜಿಲ್ಲಾ ನ್ಯಾಯಾಧೀಶನು, ಉಚ್ಚ ನ್ಯಾಯಾಲಯದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ಅಂಥ ಸಿವಿಲ್ ನ್ಯಾಯಾಧೀಶ ಅಥವಾ ಮುನ್ಸೀಫನ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಗಳನ್ನು ತನ್ನದೇ ಆದ ನ್ಯಾಯಾಲಯಕ್ಕೆ ಹಿಂತೆಗೆದುಕೊಳ್ಳಬಹುದು ಅಥವಾ ಅವುಗಳನ್ನು ವಿಲೇ ಮಾಡಲು ಸಕ್ಷಮವಾಗಿರುವ ತನ್ನ ಆಡಳಿತಾತ್ಮಕ ನಿಯಂತ್ರಣಕ್ಕೊಳಪಟ್ಟಿರುವ ಇತರ ಯಾವುದೇ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹಿಂತೆಗೆದುಕೊಂಡ ಅಥವಾ ವರ್ಗಾಯಿಸಿದ ವ್ಯವಹರಣೆಗಳನ್ನು, ಯಾವ ನ್ಯಾಯಾಲಯಕ್ಕೆ ಅವುಗಳನ್ನು ಹಾಗೆ ಹಿಂತೆಗೆದುಕೊಳ್ಳಲಾಯಿತೋ ಅಥವಾ ವರ್ಗಾಯಿಸಲಾಯಿತೋ ಆ ನ್ಯಾಯಾಲಯದಲ್ಲಿ ಅವುಗಳನ್ನು ಹೂಡಲಾಗಿದ್ದಿದ್ದರೆ ಹೇಗೋ ಹಾಗೇ ವಿಲೇ ಮಾಡತಕ್ಕದ್ದು.

(3) ಜಿಲ್ಲಾ ನ್ಯಾಯಾಧೀಶನು, (1)ನೇ ಉಪಪ್ರಕರಣದ ಮೇರೆಗೆ ಹಿಂತೆಗೆದುಕೊಂಡ ಅಥವಾ ವರ್ಗಾಯಿಸಿದ ಯಾವುದೇ ವ್ಯವಹರಣೆಗಳನ್ನು ತನ್ನದೇ ಆದ ಅಥವಾ ಇತರ ಯಾವುದೇ ನ್ಯಾಯಾಲಯಕ್ಕೆ ಪುನಃ ವರ್ಗಾಯಿಸಬಹುದು.

(4) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಘಟನೆಯು ಸಂಭವಿಸಿದ ಮೇಲೆ, ಸಿವಿಲ್ ನ್ಯಾಯಾಧೀಶನ ಅಥವಾ ಮುನ್ಸೀಫನ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿಲ್ಲದಿರುವಂಥ ವ್ಯವಹರಣೆಗಳ ಉದ್ದೇಶಕ್ಕಾಗಿ ಮತ್ತು ಯಾವುದರ ಬಗ್ಗೆ ಆ ನ್ಯಾಯಾಲಯವು ಅನನ್ಯ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆಯೋ ಅದರ ಬಗ್ಗೆ ಜಿಲ್ಲಾ ನ್ಯಾಯಾಧೀಶನು, ಆ ನ್ಯಾಯಾಲಯದ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಮತ್ತು ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಬಹುದು.

**27. ನಿಯಮಗಳನ್ನು ರಚಿಸಲು ಉಚ್ಚ ನ್ಯಾಯಾಲಯದ ಅಧಿಕಾರ.–** (1) ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ಈ ಅಧಿನಿಯಮಕ್ಕೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿಗೆ ಸುಸಂಗತವಾಗಿರುವಂತೆ–

(ಕ) ಪ್ರತಿತೊಂದು ಸಿವಿಲ್ ನ್ಯಾಯಾಲಯದ ವ್ಯವಹರಣೆಗಳನ್ನು ಇಡತಕ್ಕ ಮತ್ತು ಅಭಿಲೇಖಿಸಬೇಕಾದಂಥ ರೀತಿಯನ್ನು ನಿಯಮಿಸಿ;

(ಖ) ಸಿವಿಲ್ ನ್ಯಾಯಾಲಯಗಳಲ್ಲಿ ಕಾಗದ ಪತ್ರಗಳ ಪ್ರತಿಗಳನ್ನು ಕೊಡುವುದನ್ನು ವಿನಿಯಮಿಸಿ,

(ಗ) ಸಿವಿಲ್ ನ್ಯಾಯಾಲಯಗಳ ಲಿಪಿಕ ಅಧಿಕಾರಿಗಳ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ವಿನಿಯಮಿಸಿ;

(ಘ) ಸಿವಿಲ್ ನ್ಯಾಯಾಲಯಗಳಲ್ಲಿ ಅರ್ಜಿ ಬರೆಯುವವರಾಗಿ ಕೆಲಸ ಮಾಡಲು ಯಾವ ವ್ಯಕ್ತಿಗಳಿಗೆ ಪರವಾನಗಿ ಅನುಮತಿ ಕೊಡತಕ್ಕದೆಂಬುದನ್ನು ಘೋಷಿಸಿ ಮತ್ತು ಅಂಥ ವ್ಯಕ್ತಿಗಳಿಗೆ ಲೈಸನ್ಸ್‌ಗಳನ್ನು ಕೊಡುವುದನ್ನು ಅವರು ಕೆಲಸವನ್ನು ನಡೆಸುವುದನ್ನು ಮತ್ತು ಅವರು ವಿಧಿಸಬೇಕಾದ ಫೀಜುಗಳ ಶ್ರೇಣಿಯನ್ನು ವಿನಿಯಮಿಸಿ;

(ಙ) (ಘ) ಖಂಡದ ಮೇರೆಗೆ ರಚಿಸಿದ ಯಾವುದೇ ನಿಯಮದ ಉಲ್ಲಂಘನೆಗಾಗಿ ಐವತ್ತು ರೂಪಾಯಿಗಳಿಗೆ ಮೀರದಂಥ ಮೊಬಲಗಿನ ದಂಡನೆಯನ್ನು ಉಪಬಂಧಿಸಿ;

(ಚ) ನಿಯಮಗಳ ಅಂಥ ಉಲ್ಲಂಘನೆಗಳನ್ನು ಯಾವ ಪ್ರಾಧಿಕಾರಿಯು ತನಿಖೆ ನಡೆಸತಕ್ಕದ್ದು ಮತ್ತು ಯಾವ ದಂಡನೆಗಳನ್ನು ವಿಧಿಸತಕ್ಕುದೆಂಬುದನ್ನು ನಿರ್ಧರಿಸಿ ನಿಯಮಗಳನ್ನು ರಚಿಸಬಹುದು.

(2) (1)ನೇಯ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮದ ಮೇರೆಗೆ ವಿಧಿಸಲಾದ ಪ್ರತಿಯೊಂದು ದಂಡವನ್ನು ಮ್ಯಾಜಿಸ್ಟ್ರೇಟನ್ನು ತನ್ನ ಸಾಮಾನ್ಯ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ವಿಧಿಸಿದ ದಂಡವಾಗಿದಿದ್ದರೆ ಹೇಗೋ ಹಾಗೆ ವಸೂಲು ಮಾಡತಕ್ಕದ್ದು.

**28. ದೀರ್ಘ ರಜೆ.–** (1) ಆ ರಾಜ್ಯದಲ್ಲಿನ ಅಥವಾ ರಾಜ್ಯದಲ್ಲಿನ ಯಾವುದೇ ಪ್ರದೇಶದಲ್ಲಿನ ಸಿವಿಲ್ ನ್ಯಾಯಾಲಯಗಳನ್ನು, ಇಡೀ ರಾಜ್ಯಕ್ಕಾಗಿ ಅಥವಾ ರಾಜ್ಯದಲ್ಲಿನ ಅಂಥ ಪ್ರದೇಶಕ್ಕಾಗಿ ಸಾರ್ವಜನಿಕ ರಜಾ ದಿನಗಳೆಂದು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ದಿವಸಗಳೆಂದು ಮುಚ್ಚತಕ್ಕದ್ದು.

(2) ಸಿವಿಲ್ ನ್ಯಾಯಾಲಯಗಳು ಪ್ರತಿಯೊಂದು ವರ್ಷದಲ್ಲಿ ಮೂರು ದೀರ್ಘ ರಜೆಗಳನ್ನು ಹೊಂದಿರತಕ್ಕದ್ದು ಎಂದರೆ ಬೇಸಿಗೆ, ದಸರಾ ಮತ್ತು ಚಳಿಗಾಲ ಮತ್ತು ಸದರಿ ಮೂರು ದೀರ್ಘ ರಜೆಗಳ ಒಟ್ಟು ಸಂಖ್ಯೆಯು ಅರವತ್ತು ದಿವಸಗಳನ್ನು ಮೀರತಕ್ಕದ್ದಲ್ಲ ಮತ್ತು ಉಚ್ಚ ನ್ಯಾಯಾಲಯವು ಪ್ರತಿಯೊಂದು ದೀರ್ಘ ರಜೆಯ ಅವಧಿಯನ್ನು ನಿಗದಿಪಡಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ (1908ರ ಕೇಂದ್ರ ಅಧಿನಿಯಮ, 1908ರ 5ರಲ್ಲಿ) ಏನು ಅಡಕವಾಗಿದ್ದಾಗ್ಯೂ-

(ಕ) ಉಚ್ಚ ನ್ಯಾಯಾಲಯವು ಯಾವುದೇ ಜಿಲ್ಲಾ ನ್ಯಾಯಾಲಯದಲ್ಲಿ ಒಬ್ಬನಿಗಿಂತ ಹೆಚ್ಚು ಜಿಲ್ಲಾ ನ್ಯಾಯಾಧೀಶರಿರುವಲ್ಲಿ ಯಾವುದೇ ದೀರ್ಘ ರಜೆ ಅಥವಾ ಅದರ ಯಾವುದೇ ಭಾಗದಲ್ಲಿ ಯಾವುದೇ ಜಿಲ್ಲಾ ನ್ಯಾಯಾಲಯದ ಮುಂದೂಡಿಕೆಯ ಅವಧಿಗಾಗಿ ರಜಾ ಜಿಲ್ಲಾ ನ್ಯಾಯಾಧೀಶನಾಗಿ ಆ ಜಿಲ್ಲಾ ನ್ಯಾಯಾಧೀಶರಲ್ಲಿ ಯಾವನೇ ಒಬ್ಬನನ್ನು ಅಧಿಸೂಚನೆ ಮೂಲಕ ಹೆಸರಿಸಬಹುದು ;

(ಖ) ಯಾವುದೇ ಜಿಲ್ಲೆಯಲ್ಲಿ ಒಬ್ಬನೇ ಜಿಲ್ಲಾ ನ್ಯಾಯಾಧೀಶನಿರುವಲ್ಲಿ ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ, ಯಾವುದೇ ದೀರ್ಘ ರಜೆ ಅಥವಾ ಅದರ ಯಾವುದೇ ಭಾಗದಲ್ಲಿ ಅಂಥ ಜಿಲ್ಲಾ ನ್ಯಾಯಾಲಯದ ಮುಂದೂಡಿಕೆಯ ಅವಧಿಗಾಗಿ ಸಂದರ್ಭಾನುಸಾರ ಅದರ ಜಿಲ್ಲಾ ನ್ಯಾಯಾಲಯದ ರಜಾ ಜಿಲ್ಲಾ ನ್ಯಾಯಾಧೀಶನಾಗಿ ಅಂಥ ಜಿಲ್ಲಾ ನ್ಯಾಯಾಧೀಶನನ್ನು ಹೆಸರಿಸಬಹುದು ಅಥವಾ ರಜಾ ಸಿವಿಲ್ ನ್ಯಾಯಾಧೀಶನಾಗಿ ಜಿಲ್ಲೆಯಲ್ಲಿ ಸಿವಿಲ್ ನ್ಯಾಯಾಧೀಶನನ್ನು ನೇಮಕ ಮಾಡಬಹುದು ;

ಉಚ್ಚ ನ್ಯಾಯಾಲಯವು ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ರಜಾ ಸಿವಿಲ್ ನ್ಯಾಯಾಧೀಶರು ಅಥವಾ ರಜಾ ಜಿಲ್ಲಾ ನ್ಯಾಯಾಧೀಶನು ನಿರ್ವಹಿಸಬೇಕಾದ ಕೆಲಸವನ್ನು ವಿನಿಯಮಿಸಬಹುದು;

(4) (ಕ) ರಜಾ ಜಿಲ್ಲಾ ನ್ಯಾಯಾಧೀಶನ ಅಥವಾ ರಜಾ ಸಿವಿಲ್ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳು, ಸಂಬಂಧಪಟ್ಟ ಜಿಲ್ಲಾ ನ್ಯಾಯಾಲಯದಂಥವುಗಳೇ ಆಗಿರತಕ್ಕುದು.

(ಖ) ರಜಾ ಸಿವಿಲ್ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯು, ಸಂಬಂಧಪಟ್ಟ ಜಿಲ್ಲೆಯಲ್ಲಿ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ (ಅದು ಜಿಲ್ಲಾ ನ್ಯಾಯಾಲಯವಾಗಿರಲಿ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವಾಗಿರಲಿ ಅಥವಾ ಮುನ್ಸೀಫನ ನ್ಯಾಯಾಲಯವಾಗಿರಲಿ) ಅಂಥ ನ್ಯಾಯಾಲಯವನ್ನು ಯಾವುದೇ ದೀರ್ಘ ರಜೆಗಾಗಿ ಮುಂದೂಡಿರುವಾಗ ಇತ್ಯರ್ಥದಲ್ಲಿರುವ ಅಥವಾ ಅದರಿಂದ ಸಂಜ್ಞೇಯವಾಗಬಹುದಾದ ಎಲ್ಲಾ ದಾವೆಗಳು ಅಪೀಲುಗಳು ಅಥವಾ ಇತರ ವ್ಯವಹರಣೆಗಳಿಗೆ ವ್ಯಾಪ್ತವಾಗತಕ್ಕದ್ದು.

(5) ರಜಾ ಜಿಲ್ಲಾ ನ್ಯಾಯಾಧೀಶನು ಅಥವಾ ರಜಾ ಸಿವಿಲ್ ನ್ಯಾಯಾಧೀಶನು ನ್ಯಾಯಾಲಯವನ್ನು ನಡೆಸಬೇಕಾದಂಥ ಸ್ಥಳವು ಸಂಬಂಧಪಟ್ಟ ಜಿಲ್ಲಾ ನ್ಯಾಯಾಲಯವನ್ನು ನಡೆಸಬಹುದಾದಂಥ ಸ್ಥಳವೇ ಆಗಿರತಕ್ಕದ್ದು. ರಜಾ ಜಿಲ್ಲಾ ನ್ಯಾಯಾಧೀಶ ಅಥವಾ ರಜಾ ಸಿವಿಲ್ ನ್ಯಾಯಾಧೀಶನು ಜಿಲ್ಲೆಯಲ್ಲಿರುವ ಹಲವಾರು ಸಿವಿಲ್ ನ್ಯಾಯಾಲಯಗಳ ಸಿಬ್ಬಂದಿಯ ಮೇಲೆ ಉಚ್ಚ ನ್ಯಾಯಾಲಯವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ಧರಿಸಬಹುದಾದಂಥ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರತಕ್ಕದ್ದು.

(6) ರಜಾ ಜಿಲ್ಲಾ ನ್ಯಾಯಾಧೀಶನ ಅಥವಾ ರಜಾ ಸಿವಿಲ್ ನ್ಯಾಯಾಧೀಶನ ನೇಮಕವಾಗಿದ್ದಾಗ್ಯೂ, ಜಿಲ್ಲೆಯಲ್ಲಿನ ಪ್ರತಿಯೊಂದು ಸಿವಿಲ್ ನ್ಯಾಯಾಲಯವು ಯಾವುದೇ ದೀರ್ಘ ರಜೆಗಾಗಿ ಅದನ್ನು ಮುಂದೂಡಿರುವ ಅವಧಿಯಲ್ಲಿ ಕಾಲ ಪರಿಮಿತಿ ಅಧಿನಿಯಮ, 1963ರ (1963ರ 36 ಕೇಂದ್ರ ಅಧಿನಿಯಮ) 4ನೇಯ ಪ್ರಕರಣದ ಉದ್ದೇಶಗಳಿಗಾಗಿ ಮುಚ್ಚಿರುವುದಾಗಿ ಭಾವಿಸತಕ್ಕದ್ದು.

(7) ಯಾವುದೇ ದೀರ್ಘ ರಜೆಯ ತರುವಾಯ ಜಿಲ್ಲಾ ನ್ಯಾಯಾಲಯವು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯವು ಅಥವಾ ಮುನ್ಸೀಫ್ ನ್ಯಾಯಾಲಯವು ಪುನರಾರಂಭವಾದ ಮೇಲೆ ರಜಾ ಜಿಲ್ಲಾ ನ್ಯಾಯಾಧೀಶನ ಅಥವಾ ರಜಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ಆದರೆ ಈ ಪ್ರಕರಣವು ಇಲ್ಲದಿದ್ದರೆ ಸಂದರ್ಭಾನುಸಾರ ಅಂಥ ಜಿಲ್ಲಾ ನ್ಯಾಯಾಲಯ, ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಅಥವಾ ಮುನ್ಸೀಫ್ ನ್ಯಾಯಾಲಯದಲ್ಲಿ ಹೂಡಬಹುದಾಗಿದ್ದ ಅಥವಾ ಇತ್ಯರ್ಥದಲ್ಲಿರ ಬಹುದಾಗಿದ್ದಂಥ ಎಲ್ಲಾ ದಾವೆಗಳು, ಅಪೀಲುಗಳು ಮತ್ತು ವ್ಯವಹರಣೆಯನ್ನು, ಅಂಥ ಜಿಲ್ಲಾ ನ್ಯಾಯಾಲಯ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯ ಅಥವಾ ಮುನ್ಸೀಫನ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ರಜಾ ಜಿಲ್ಲಾ ನ್ಯಾಯಾಧೀಶನು ಅಥವಾ ರಜಾ ಸಿವಿಲ್ ನ್ಯಾಯಾಧೀಶನು ಮಾಡಿದ ಯಾವುದೇ ಡಿಕ್ರಿ, ಆದೇಶ

ಅಥವಾ ವ್ಯವಹರಣೆಯು ಅಂಥ ವರ್ಗಾವಣೆಯಾದ ತರುವಾಯ, ಸಂಬಂಧಪಟ್ಟ ನ್ಯಾಯಾಲಯವು ಮಾಡಿದ ಡಿಕ್ರಿ, ಆದೇಶ ಅಥವಾ ವ್ಯವಹರಣೆಯೆಂದು ಭಾವಿಸತಕ್ಕದ್ದು.

(8) (7)ನೇ ಉಪ ಪ್ರಕರಣದ ಉಪಬಂಧಗಳು ಏನೇ ಇದ್ದಾಗ್ಯೂ, ರಜಾ ಜಿಲ್ಲಾ ನ್ಯಾಯಾಧೀಶನ ಅಥವಾ ರಜಾ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದ ಡಿಕ್ರಿಯಿಂದ ಅಥವಾ ಆದೇಶದಿಂದ ಅಂಥ ಅಪೀಲಿಗೆ ಕಾನೂನು ಮೂಲಕ ಅವಕಾಶವಿರುವಾಗ, ಯಾವುದೇ ಅಪೀಲು ಉಚ್ಚ ನ್ಯಾಯಾಲಯಕ್ಕೆ ಇರತಕ್ಕದ್ದು.

**29. ನಿರಸನ ಮತ್ತು ಉಳಿಸುವಿಕೆಗಳು.–** (1) ಗೊತ್ತುಪಡಿಸಿದ ದಿವಸದಂದು ಮತ್ತು ಅಂದಿನಿಂದ ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಗಳು ನಿರಸನಗೊಳ್ಳತಕ್ಕದ್ದು.

ಪರಂತು, ಇಂಥ ನಿರಸನವು, ಹಾಗೆ ನಿರಸನಗೊಂಡ ಅಧಿನಿಯಮಿತಗಳ ಪೂರ್ವ ಪ್ರವರ್ತನೆಯನ್ನು ಬಾಧಿಸತಕ್ಕದ್ದಲ್ಲ ಮತ್ತು ಮಾಡಿದ ಯಾವುದೇ ಕಾರ್ಯ ಮತ್ತು ಕೈಗೊಂಡ ಯಾವುದೇ ಕ್ರಮವು (ಅವುಗಳ ಉಪಬಂಧಗಳ ಮೂಲಕ ಅಥವಾ ಮೇರೆಗೆ ರಚಿಸಿದ ಜಿಲ್ಲೆಗಳು, ನಿರ್ಧರಿಸಿದ ಪರಿಮಿತಿಗಳು, ಸ್ಥಾಪಿಸಿದ ಅಥವಾ ರಚಿಸಿದ ನ್ಯಾಯಾಲಯಗಳು, ಮಾಡಿದ ನೇಮಕಾತಿಗಳು, ನಿಯಮಗಳು ಅಥವಾ ಆದೇಶಗಳು, ವಹಿಸಿದ ಪ್ರಕಾರ್ಯಗಳು, ಕೊಟ್ಟ ಅಧಿಕಾರಗಳು ನಿಯಮಿಸಿದ ಮೊಹರುಗಳು ಅಥವಾ ನಮೂನೆಗಳು, ನಿರ್ಧರಿಸಿದ ಅಥವಾ ನಿಹಿತಗೊಳಿಸಿದ ಅಧಿಕಾರ ವ್ಯಾಪ್ತಿಗಳು ಮತ್ತು ಹೊರಡಿಸಿದ ಅಧಿಸೂಚನೆಗಳು ಅಥವಾ ನೋಟೀಸುಗಳನ್ನು ಒಳಗೊಂಡಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗುಷ್ಟರ ಮಟ್ಟಿಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಿದ ಹೊರತು ಮತ್ತು ಅಲ್ಲಿಯವರೆಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(1) (1)ನೇಯ ಉಪಪ್ರಕರಣದಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದಾಗ್ಯೂ, ಸಿವಿಲ್ ನ್ಯಾಯಾಲಯಕ್ಕೆ ಯಾವುದೇ ಕಾನೂನಿನಲ್ಲಿ ಅಥವಾ ಲಿಖಿತದಲ್ಲಿ ಮಾಡಿದ ಯಾವುದೇ ಉಲ್ಲೇಖವು, ಸಂದರ್ಭಾನುಸಾರ, 12ನೇಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ, ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದುದೆಂದು ಭಾವಿಸಿದ ಸಂವಾದಿ ಸಿವಿಲ್ ನ್ಯಾಯಾಲಯಕ್ಕೆ ಅಥವಾ ಈ ಅಧಿನಿಯಮದ ಮೇರೆಗೆ ಸ್ಥಾಪಿತವಾದಂಥ ಸಿವಿಲ್ ನ್ಯಾಯಾಲಯಕ್ಕೆ ಮಾಡಿದ ಉಲ್ಲೇಖವೆಂದು ಭಾವಿಸತಕ್ಕದ್ದು.

(2) (1)ನೇಯ ಉಪಪ್ರಕರಣದಲ್ಲಿ ಅಥವಾ ಈ ಅಧಿನಿಯಮದ ಇತರ ಯಾವುದೇ ಉಪಬಂಧದಲ್ಲಿ ಅಥವಾ (1)ನೇಯ ಉಪಪ್ರಕರಣದ ಮೂಲಕ ನಿರಸನಗೊಳಿಸಿದ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಅಥವಾ ಕಾನೂನಿನ ಬಲ ಹೊಂದಿರುವ ಉಪಬಂಧದಲ್ಲಿ ಏನೇ ಇದ್ದಾಗ್ಯೂ.–

(ಕ) ಈ ಅಧಿನಿಯಮದ ಮೇರೆಗೆ ಅವು ಬೇರೊಂದು ನ್ಯಾಯಾಲಯದಲ್ಲಿ ಹೂಡಬೇಕಾಗಿದ್ದ ಅಥವಾ ಪ್ರಾರಂಭಿಸಬೇಕಾಗಿದ್ದಂಥ ಯಾವುದೇ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ, ಎಲ್ಲಾ ದಾವೆಗಳು ಮತ್ತು ವ್ಯವಹರಣೆಗಳು (ಅಪೀಲುಗಳು ಮತ್ತು ಅವುಗಳಿಗೆ ಸಂಬಂಧಿಸಿದ ವ್ಯವಹರಣೆಗಳನ್ನು ಹೊರತುಪಡಿಸಿ) ಗೊತ್ತುಪಡಿಸಿದ ದಿವಸದಂದು ಇತರ ಅಂಥ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ದಾವೆಗಳನ್ನು ಮತ್ತು ವ್ಯವಹರಣೆಯನ್ನು ಅಂಥ ಇತರ ನ್ಯಾಯಾಲಯದಲ್ಲಿ ಹೂಡಲಾಗಿದ್ದಿದ್ದರೆ ಅಥವಾ ಪ್ರಾರಂಭಿಸಲಾಗಿದ್ದಿದ್ದರೆ ಹೇಗೋ ಹಾಗೆ ಕಾನೂನಿಗನುಸಾರವಾಗಿ ಅಂಥ ಇತರ ನ್ಯಾಯಾಲಯವು ಅವುಗಳನ್ನು ಮುಂದುವರಿಸತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

(ಖ) (ಕ) ಖಂಡದಲ್ಲಿ ಉಲ್ಲೇಖಿಸಿದ ದಾವೆಗಳು ಮತ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ

(i) ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಹತ್ತು ಸಾವಿರ ರೂಪಾಯಿಗಳಿಗೆ ಮೀರದಿದ್ದರೆ ಯಾವುದೇ ಅಪೀಲು ಜಿಲ್ಲಾ ನ್ಯಾಯಾಲಯಕ್ಕೆ ಇರತಕ್ಕದ್ದಲ್ಲ, ಆದರೆ ಸಿವಿಲ್ ನ್ಯಾಯಾಧೀಶನಿಗೆ ಇರತಕ್ಕದ್ದು;

(ii) ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಹತ್ತು ಸಾವಿರ ರೂಪಾಯಿಗಳಿಗೆ ಮೀರಿದ್ದು ಆದರೆ, ಇಪ್ಪತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಯಾವುದೇ ಅಪೀಲು ಉಚ್ಚ ನ್ಯಾಯಾಲಯಕ್ಕೆ ಇರತಕ್ಕದ್ದಲ್ಲ, ಆದರೆ ಜಿಲ್ಲಾ ನ್ಯಾಯಾಲಯಕ್ಕೆ ಇರತಕ್ಕದ್ದು ;

(ಗ) ಈ ಅಧಿನಿಯಮದ ಮೇರೆಗೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಹೂಡಬೇಕಾಗಿರುವಂಥ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ–ಅಪೀಲುಗಳನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ವ್ಯವಹರಣೆಗಳನ್ನು ಖಂಡದಲ್ಲಿ ನಿರ್ದಿಷ್ಟಪಡಿಸಿದ ಪ್ರಕರಣಗಳನ್ನು ಹೊರತುಪಡಿಸಿ ಗೊತ್ತುಪಡಿಸಿದ ದಿನದಂದು ಸಂದರ್ಭಾನುಸಾರ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಅಥವಾ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ಅಪೀಲುಗಳು ಮತ್ತು ವ್ಯವಹರಣೆಗಳನ್ನು ಅಂಥ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದಲ್ಲಿ ಹೂಡಲಾಗಿದಿದ್ದರೆ ಹೇಗೋ ಹಾಗೆ, ಅಂಥ ನ್ಯಾಯಾಲಯವು ಕಾನೂನಿಗೆ ಅನುಸಾರವಾಗಿ ವಿಲೇ ಮಾಡತಕ್ಕದ್ದು.

(ಘ) ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಾಗಿರುವಂಥ ಅಸಲು ದಾವೆಗಳಲ್ಲಿ ಮತ್ತು ಸಿವಿಲ್ ಸ್ವರೂಪದ ವ್ಯವಹರಣೆಗಳಲ್ಲಿ ಮೈಸೂರು ಪ್ರದೇಶದಲ್ಲಿ ಅಧೀನ ನ್ಯಾಯಾಧೀಶನ ಅಥವಾ ಸಿವಿಲ್ ನ್ಯಾಯಾಧೀಶನು, ಹೈದರಾಬಾದು ಪ್ರದೇಶದಲ್ಲಿ ಮತ್ತು ಮದ್ರಾಸು ಪ್ರದೇಶದಲ್ಲಿ ಅಧೀನ ನ್ಯಾಯಾಧೀಶನು ಮಾಡಿದ ಡಿಕ್ರಿಗಳು ಮತ್ತು ಆದೇಶಗಳಿಂದ ಉಚ್ಚ ನ್ಯಾಯಾಲಯದ ಮುಂದೆ ಇತ್ಯರ್ಥಗಳಲ್ಲಿರುವ ಅಪೀಲುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ವ್ಯವಹರಣೆಗಳು ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ಅಪೀಲುಗಳನ್ನು ಅಥವಾ ವ್ಯವಹರಣೆಗಳನ್ನು ಅಂಥ ನ್ಯಾಯಾಲಯದಲ್ಲಿ ಹೂಡಲಾಗಿದ್ದಿದ್ದರೆ ಹೇಗೋ ಹಾಗೆ ಅಂಥ ನ್ಯಾಯಾಲಯವು, ಕಾನೂನಿಗೆ ಅನುಸಾರವಾಗಿ ವಿಲೆ ಮಾಡತಕ್ಕದ್ದು,

(ಙ) ಹೈದರಾಬಾದು ಪ್ರದೇಶದಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಅಥವಾ ಮದ್ರಾಸು ಪ್ರದೇಶದಲ್ಲಿ ಜಿಲ್ಲಾ ಮುನ್ಸೀಫನು ಮಾಡಿದ ಡಿಕ್ರಿಗಳು ಅಥವಾ ಆದೇಶಗಳಿಂದ ಜಿಲ್ಲಾ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಅಪೀಲುಗಳು ಮತ್ತು ಅವುಗಳಿಗೆ ಸಂಬಂಧಿಸಿದ ವ್ಯವಹರಣೆಗಳು ಗೊತ್ತುಪಡಿಸಿದ ದಿವಸದಂದು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ಅಪೀಲುಗಳು ಮತ್ತು ವ್ಯವಹರಣೆಗಳನ್ನು ಅಂಥ ನ್ಯಾಯಾಲಯದಲ್ಲಿ ಹೂಡಲಾಗದಿದ್ದರೆ ಹೇಗೋ ಹಾಗೆ ಕಾನೂನಿಗನುಸಾರವಾಗಿ ಅಂಥ ನ್ಯಾಯಾಲಯವು ವಿಲೇ ಮಾಡತಕ್ಕದ್ದು ;

(ಙಙ) ಮುಂಬಯಿ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1863ರ 23ನೇ ಪ್ರಕರಣದ ಮೇರೆಗೆ ಸಿವಿಲ್ ನ್ಯಾಯಾಧೀಶನ (ಜ್ಯೇಷ್ಠ ವಿಭಾಗ) ನ್ಯಾಯಾಲಯದಲ್ಲಿ ಸಹಾಯ ಮಾಡಲು ನೇಮಕಗೊಂಡ ಅಥವಾ ಪ್ರತಿಯೋಜಿತನಾದ ಜಂಟಿ (ಕಿರಿಯ ವಿಭಾಗ) ಸಿವಿಲ್ ನ್ಯಾಯಾಧೀಶನನ್ನು ಹೊರತುಪಡಿಸಿ, ಸಿವಿಲ್ ನ್ಯಾಯಾಧೀಶನು (ಕಿರಿಯ ವಿಭಾಗ ಡಿಕ್ರಿಗಳು ಅಥವಾ ಆದೇಶಗಳಿಂದ ಜಿಲ್ಲಾ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ ಅಪೀಲುಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ವ್ಯವಹರಣೆಗಳು, ಕರ್ನಾಟಕ ಸಿವಿಲ್ ನ್ಯಾಯಾಲಯ (ತಿದ್ದುಪಡಿ) ಅಧಿನಿಯಮ, 1965ರ ಪ್ರಾರಂಭದ ದಿನಾಂಕದಂದು ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅಂಥ ಅಪೀಲುಗಳನ್ನು ಮತ್ತು ವ್ಯವಹರಣೆಗಳನ್ನು ಅಂಥ ನ್ಯಾಯಾಲಯದಲ್ಲಿ ಹೂಡಲಾಗಿದಿದ್ದರೆ ಹೇಗೋ ಹಾಗೆ ಕಾನೂನಿಗನುಸಾರವಾಗಿ ಅಂಥ ನ್ಯಾಯಾಲಯ ವಿಲೆ ಮಾಡತಕ್ಕದ್ದು;

(ಚ) ಗೊತ್ತುಪಡಿಸಿದ ದಿವಸಕ್ಕೆ ಮುಂಚೆ,–

(i) ಮೈಸೂರು ಪ್ರದೇಶ ಹೈದರಾಬಾದು ಪ್ರದೇಶ ಅಥವಾ ಕೊಡಗು ಜಿಲ್ಲೆಯಲ್ಲಿ ಮುನ್ಸೀಫನು ;

(ii) ಮದ್ರಾಸು ಪ್ರದೇಶದಲ್ಲಿ ಜಿಲ್ಲಾ ಮುನ್ಸೀಫನು; ಮತ್ತು

(iii) ಮುಂಬಯಿ ಪ್ರದೇಶದಲ್ಲಿ ಸಿವಿಲ್ ನ್ಯಾಯಾಧೀಶ (ಕಿರಿಯ ವಿಭಾಗ) ಇವನು ವಿಲೇ ಮಾಡಿದ ಎಲ್ಲ ದಾವೆಗಳು ಅಥವಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದಲ್ಲ ಅದರೆ ಆ ಅಧೀನಿಯಮದ ಮೇರೆಗೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು.

(ಛ) ಮೈಸೂರು ಪ್ರದೇಶದಲ್ಲಿ ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ಅಧೀನ ನ್ಯಾಯಾಧೀಶನು ವಿಲೇ ಮಾಡಿದ ಎಲ್ಲ ದಾವೆಗಳು ಅಥವಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ನ್ಯಾಯಾಲಯಕ್ಕೆ ಯಾವುದೇ ಅಪೀಲು ಇರತಕ್ಕದ್ದಲ್ಲ, ಆದರೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು;

(ಜ) ಹೈದರಾಬಾದು ಪ್ರದೇಶದಲ್ಲಿ ಅಥವಾ ಮದ್ರಾಸು ಪ್ರದೇಶದಲ್ಲಿ ಅಧೀನ ನ್ಯಾಯಾಧೀಶನು ವಸ್ತು ವಿಷಯ ಮೊಬಲಗು ಅಥವಾ ಮೌಲ್ಯವು ಹತ್ತು ಸಾವಿರ ರೂಪಾಯಿಗಳನ್ನು ಮೀರದಿದ್ದಂಥ ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ವಿಲೇ ಮಾಡಿದ ಎಲ್ಲ ದಾವೆಗಳು ಅಥವಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ ಯಾವುದೇ ಅಪೀಲು ಇರತಕ್ಕದ್ದಲ್ಲ, ಆದರೆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು ;

(ಝ) ವಸ್ತು ವಿಷಯದ ಮೊಬಲಗು ಅಥವಾ ಮೌಲ್ಯವು ಹತ್ತು ಸಾವಿರ ರೂಪಾಯಿಗಳಿಗೆ ಮೀರಿದ್ದು, ಆದರೆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇರುವಂಥ, ಗೊತ್ತುಪಡಿಸಿದ ದಿವಸಕ್ಕೆ ಮುಂಚೆ–

(i) ಜಿಲ್ಲಾ ನ್ಯಾಯಾಲಯವನ್ನು ಹೊರತುಪಡಿಸಿ ಇತರ ಯಾವುದೇ ನ್ಯಾಯಾಲಯವು ವಿಲೇ ಮಾಡಿದ ಎಲ್ಲಾ ದಾವೆಗಳು ಅಥವಾ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯಕ್ಕೆ ಯಾವುದೇ ಅಪೀಲು ಇರತಕ್ಕದ್ದಲ್ಲ ಅದರೆ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು; ಮತ್ತು

(ii) ಜಿಲ್ಲಾ ನ್ಯಾಯಾಲಯವು ವಿಲೇ ಮಾಡಿದ ಎಲ್ಲ ದಾವೆಗಳು ಮತ್ತು ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಇರತಕ್ಕದ್ದು;

(ಞ) ಗೊತ್ತುಪಡಿಸಿದ ದಿವಸಕ್ಕೆ ಮುಂಚೆ ವಿಲೇ ಮಾಡಿದ ಯಾವುದೇ ದಾವೆ ಅಥವಾ ವ್ಯವಹರಣೆಗೆ ಸಂಬಂಧಿಸಿದಂತೆ, ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೂಡುವ ಬದಲಾಗಿ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಇದ್ದರೆ, ಜಿಲ್ಲಾ ನ್ಯಾಯಾಲಯಕ್ಕೆ ಅಪೀಲು ಹೂಡುವುದಕ್ಕಾಗಿನ ಕಾಲ ಪರಿಮಿತಿಯ ಅವಧಿಯು, ಉಚ್ಚ ನ್ಯಾಯಾಲಯಕ್ಕೆ ಅಪೀಲು ಹೂಡುವುದಕ್ಕಾಗಿ ಇರುವಂಥದೇ ಆಗಿರತಕ್ಕದ್ದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಯಾವ ನ್ಯಾಯಾಲಯಕ್ಕೆ ಯಾವುದೇ ದಾವೆ, ಅಪೀಲು ಅಥವಾ ವ್ಯವಹರಣೆಯನ್ನು ವರ್ಗಾಯಿಸತಕ್ಕುದು ಅಥವಾ ಯಾವ ನ್ಯಾಯಾಲಯದಲ್ಲಿ ಯಾವುದೇ ಅಪೀಲನ್ನು ಹೂಡತಕ್ಕದ್ದು ಎಂಬ ಬಗ್ಗೆ ಯಾವುದೇ ಸಂದೇಹವಿದ್ದರೆ, ಉಚ್ಚ ನ್ಯಾಯಾಲಯವು ಹೆಸರಿಸಿದ ನ್ಯಾಯಾಲಯವು, ಯಾವ ನ್ಯಾಯಾಲಯಕ್ಕೆ ಅಂಥ ದಾವೆ, ಅಪೀಲು ಅಥವಾ ವ್ಯವಹರಣೆಯು ವರ್ಗಾಯಿತವಾಗತಕ್ಕದ್ದೋ ಅಥವಾ ಅಂಥ ಅಪೀಲನ್ನು ಹೂಡತಕ್ಕದ್ದೋ ಆ ನ್ಯಾಯಾಲಯವಾಗಿರತಕ್ಕದ್ದೋ ಮತ್ತು ಉಚ್ಚ ನ್ಯಾಯಾಲಯದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**30. ಜಾರಿಯಲ್ಲಿರುವ ಇತರ ಕೆಲವು ಕಾನೂನುಗಳಲ್ಲಿನ ಇತರ ಪದಗಳ ಬದಲಾಗಿ "ಸಿವಿಲ್ ನ್ಯಾಯಾಧೀಶ" ಮತ್ತು "ಮುನ್ಸೀಫ್" ಎಂಬ ಪದದ ಪ್ರತ್ಯಾಯೋಜನೆ.–** ಜಾರಿಯಲ್ಲಿರುವ ಯಾವುದೇ ಕಾನೂನು ಅಥವಾ ನಿಯಮ, ಅಧಿಸೂಚನೆ ಅಥವಾ ಆದೇಶದಲ್ಲಿ ಕೆಳಕಂಡ (1)ನೇಯ ಅಂಕಣದಲ್ಲಿನ ಪದಕ್ಕೆ ಬದಲಾಗಿ (2)ನೇಯ ಅಂಕಣದಲ್ಲಿನ ಸಂವಾದಿ ನಮೂದನೆಯಲ್ಲಿನ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

| **ಅಂಕಣ** | **ಅಂಕಣ** |
|---|---|
| **(1)** | **(2)** |
| ಸಿವಿಲ್ ನ್ಯಾಯಾಧೀಶ (ಜ್ಯೇಷ್ಠ ವಿಭಾಗ) | ಸಿವಿಲ್ ನ್ಯಾಯಾಧೀಶ |
| ಅಧೀನ ನ್ಯಾಯಾಧೀಶ | ಸಿವಿಲ್ ನ್ಯಾಯಾಧೀಶ |
| ಸಿವಿಲ್ ನ್ಯಾಯಾಧೀಶ (ಕಿರಿಯ ವಿಭಾಗ) | ಮುನ್ಸೀಫ್ |
| ಜಿಲ್ಲಾ ಮುನ್ಸೀಫ್ | ಮುನ್ಸೀಫ್ |

**ಅನುಸೂಚಿ**

**(29ನೇಯ ಪ್ರಕರಣವನ್ನು ನೋಡಿ)**

1. ಮುಂಬೈ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1869 (1869ರ 14ನೇ ಅಧಿನಿಯಮ)
2. ಮದ್ರಾಸ್ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1873 (1873ರ 3ನೇ ಅಧಿನಿಯಮ)
3. ಮೈಸೂರು ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1883 (1883ರ 1ನೇಯ ಅಧಿನಿಯಮ)
4. ಹೈದರಾಬಾದ್ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1954 (1954ರ 36ನೇಯ ಅಧಿನಿಯಮ)
5. ಕೊಡಗು ನ್ಯಾಯಾಲಯ ಅಧಿನಿಯಮ, 1948 (ಕೊಡಗಿನ 1948ರ 2ನೇಯ ಅಧಿನಿಯಮ)

**ಪಿ. ವೆಂಕಟಸುಬ್ಬಯ್ಯ,**
ಕರ್ನಾಟಕ ರಾಜ್ಯಪಾಲರು

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, (ಪ್ರಕಟಣೆಗಳು).

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು - 01. ಕಾ.ಸೂ. ಪಿ1.